OS 94/2023

PW-01

<u>ದಿನಾಂಕಃ 04-02-2026.</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟಿ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ SND ಮಾನ್ಯ ವಕೀಲರಿಂದಃ</u>**

ನಾಯ್ಕಲ್ ಗ್ರಾಮ ರಾಯಚೂರು-ಹೈದ್ರಾಬಾದ ರಸ್ತೆಗಾದಂತೆ ಇರುತ್ತದೆ ಎಂದರೆ ಸರಿ. ಸ.ನಂ.1005/1 ಇರದಲ್ಲಿ ಚೈನ್ನೈ ಯಿಂದ ಸುರತ್ ಗೆ ಹೋಗುವ ಹೆದ್ದಾರಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸನ್ 2003 ಕ್ಕಾದಂತೆ ನಾಯ್ಕಲ ಗ್ರಾಮದಲ್ಲಿ ಮಸರು ಜಮೀನುಗಳ ಬೆಲೆ ಪ್ರತಿ ಎಕರೆಗೆ ರೂ.1,40,000/- ಗಳಿಗಾದಂತೆ ಇದ್ದವು. ಅದೇ ರೀತಿಯಾಗಿ ಎರೆ ಭೂಮಿಯ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಎಂದು ನನಗೆ ಗೊತ್ತಿರುವುದಿಲ್ಲ ಹಾಗೂ ನೀರಾವರಿ ಭೂಮಿಯ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸ.ನಂ.1005 ಇದು ನೀರಾವರಿ ಭೂಮಿಯಾಗಿರುತ್ತದೆ ಎಂದರೆ ಸರಿಯಲ್ಲ. ಸ.ನಂ.1005 ಇದು ನೀರಾವರಿ ಭೂಮಿಯಾಗಿದ್ದರೂ ಕೂಡಾ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಸದರಿ ನಾಯ್ಕಲ್ ನಿಂದ ಹೈದ್ರಾಬಾದ್, ಚೈನ್ನೈ ಸುರತ್ ರಸ್ತೆಗೆ ಇರುವುದರಿಂದ ಜಮೀನುಗಳ ಮಾರುಕಟ್ಟೆಗಳ ಬೆಲೆ ಎರಕೆಗೆ ರೂ.5,00,000/- ಇರುತ್ತದೆ ಎಂದರೆ ಸರಿಯಲ್ಲ. ಸನ್ 2002-03 ರಲ್ಲಿ  ನಾಯ್ಕಲ್ ಗ್ರಾಮದಲ್ಲಿ ಜಮಿನುಗಳು ಪ್ರತಿ ಎಕರಗೆ ಎಷ್ಟು ಬೆಲೆಗೆ ಮಾರಾಟ ಮಾಡಲಾಗಿರುತ್ತದೆ ಎಂದು ತೋರಿಸಲು ನಾನು ಖರೀದಿ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಸನ್ 2022 ರಲ್ಲಿ ಸ.ನಂ.1005/1 ರಲ್ಲಿ ಜಮೀನು ಭೂಸ್ವಾಧೀನಗೊಂಡಿದ್ದು ಅದಕ್ಕೆ ರೂ.13,00,000/- ಗಳನ್ನು ಕೊಡಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ನಿಡಿ.1 ರಂತೆ ಸುಳ್ಳಾದ ದಾಖಲೆಯನ್ನು

ತಂದು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳಾದ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.